# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – 570 006.**

**ಆಡಳಿತ ವಿಭಾಗ**


ಸಂಖ್ಯೆ:ಕರಾಮುವಿ/ಆವಿ/ಜಿಎಲ್–4/ಜಕಳಿಕನ್ಯೂಜ/2024–25 ದಿನಾಂಕ: 08/01/2025

## ಕಛೇರಿ ಆದೇಶ

ವಿಷಯ: ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಶೈಕ್ಷಣಿಕ ಮತ್ತು ಇತರೆ ಕಾರ್ಯಕ್ರಮಗಳನ್ನು ಮೀಡಿಯಾದಲ್ಲಿ ಪ್ರಚಾರ ಮಾಡುವ ಸಂಬಂಧ ಉಪಸಮಿತಿಯನ್ನು ರಚಿಸುವ ಬಗೆಗೆ.

ಉಲ್ಲೇಖ: 1. Just kannada, Online Kannada News Journal, ಇವರ ಪತ್ರ ದಿನಾಂಕ: 06/12/2024.

2. 181ನೇ ಬಿ.ಓ.ಎಂ ಸಭೆಯ ತೀರ್ಮಾನದ ದಿನಾಂಕ: 07/12/2024.

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03/01/2025.

* * * * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖ–01ರಲ್ಲಿ Just kannada, Online Kannada News Journal ಇವರು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಶೈಕ್ಷಣಿಕ ಮತ್ತು ಇತರೆ ಕಾರ್ಯಕ್ರಮಗಳನ್ನು ಮೀಡಿಯಾದಲ್ಲಿ ಪ್ರಚಾರ ಮಾಡುವ ಸಲುವಾಗಿ ಮಾನ್ಯ ಕುಲಪತಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿದ್ದರು. ಸದರಿಯವರ ಪ್ರಸ್ತಾವನೆಯನ್ನು ಉಲ್ಲೇಖ–02ರಲ್ಲಿ ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿತ್ತು. ಸದರಿ ಸಭೆಯ ತೀರ್ಮಾನದಂತೆ ಹೆಚ್ಚು ಪ್ರಚಲಿತವಾಗಿರುವ Online Kannada News Journal ಮತ್ತು ಅವುಗಳಲ್ಲಿ ಯಾವ ಮೀಡಿಯಾ ಹೆಚ್ಚು ಹೆಸರನ್ನು ಮಾಡಿರುತ್ತದೆ ಎಂಬುದನ್ನು ತಿಳಿದುಕೊಳ್ಳುವ/ಸೂಚಿಸುವ ಸಂಬಂಧ ಉಪಸಮಿತಿಯನ್ನು ರಚಿಸಲು ಉಲ್ಲೇಖ–03ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಸಂಚಾಲಕರನ್ನೊಳಗೊಂಡ ಉಪಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

| | | |
|---|---|---|
| 1) | ಕುಲಸಚಿವರು | – ಅಧ್ಯಕ್ಷರು |
| 2) | ಶ್ರೀಮತಿ ಪ್ರಾಚಿ ಗೌಡ<br>ಮಾನ್ಯ ವ್ಯವಸ್ಥಾಪನಾ ಮಂಡಳಿ ಸದಸ್ಯರು | – ಸದಸ್ಯರು |
| 3) | ಉಪಕುಲಸಚಿವರು (ಪ್ರವೇಶಾತಿ) | – ಸಂಚಾಲಕರು |

ಮುಂದುವರೆದು, ಸದರಿ ಉಪಸಮಿತಿಯು ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಶೈಕ್ಷಣಿಕ ಮತ್ತು ಇತರೆ ಕಾರ್ಯಕ್ರಮಗಳನ್ನು ಮೀಡಿಯಾದಲ್ಲಿ ಪ್ರಚಾರ ಮಾಡಲು ಹೆಚ್ಚು ಪ್ರಚಲಿತವಾಗಿರುವ Online Kannada News Journal ಮತ್ತು ಅವುಗಳಲ್ಲಿ ಯಾವ ಮೀಡಿಯಾ ಹೆಚ್ಚು ಹೆಸರನ್ನು ಮಾಡಿರುತ್ತದೆ ಎಂಬುದನ್ನು ತಿಳಿದುಕೊಳ್ಳುವ/ಸೂಚಿಸುವುದಕ್ಕೆ ಸಂಬಂಧಿಸಿದಂತೆ ಸಭೆಯನ್ನು ನಡೆಸಿ, ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ತಮ್ಮ ಶಿಫಾರಸ್ಸಿನೊಂದಿಗೆ ವರದಿಯನ್ನು ಮಾನ್ಯ ಕುಲಪತಿಯವರಿಗೆ ಸಲ್ಲಿಸುವುದು.

ಸದರಿ ಉಪಸಮಿತಿಯ ಕ್ರಮ ಸಂಖ್ಯೆ 02ರಲ್ಲಿರುವ ಸದಸ್ಯರು ವಿಶ್ವವಿದ್ಯಾನಿಲಯದ ನಿಯಮಾನುಸಾರ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಆದೇಶದ ಮೇರೆಗೆ

ಕುಲಸಚಿವ

ಗೆ,

ಮೇಲ್ಕಂಡ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಸಂಚಾಲಕರಿಗೆ.

ಪ್ರತಿ,

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್ (ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ಉಪಕುಲಸಚಿವರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು, ಸದರಿ ಉಪಸಮಿತಿಗೆ ಸಂಬಂಧಿಸಿದ ಮುಂದಿನ ಕೆಲಸಗಳನ್ನು ತಮ್ಮ ವಿಭಾಗದ ವತಿಯಿಂದ ನಿರ್ವಹಿಸಲು ಸೂಚಿಸಿದೆ.
4. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
5. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
6. ನಿರ್ದೇಶಕರು, ಐ.ಟಿ. ವಿಭಾಗ, ಕರಾಮುವಿ, ಮೈಸೂರು.
7. ಡಾ. ನವೀನ್ ಕುಮಾರ್ ಸಿ.ಜಿ, ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು, ಇವರಿಗೆ ಈ ಕಛೇರಿ ಆದೇಶವನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
8. ಸೂಚನಾ ಫಲಕಕ್ಕೆ.
9. ಕಛೇರಿ ಪ್ರತಿ.